## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಬಿ.ಎಂ. ಫಾರೂಖ್, ಶ್ರೀ ಸುನೀಲ್ ವಲ್ಯಾಪೂರ ರವರ ನಿಯಮ 72 ಗಮನ ಸೆಳೆಯುವ ಸೂಚನೆ ಸಂಖ್ಯೆ: 105 ಕ್ಕೆ ಉತ್ತರ

**ಪ್ರಶ್ನೆ:** ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಸುಂಕದಕಟ್ಟೆ ಗ್ರಾಮದ ಸರ್ವೆ ನಂ.37 ಮತ್ತು ನೆಟ್ಟಿಗೆರೆ ಗ್ರಾಮದ ಸ.ನಂ 42ರ ಜಮೀನುಗಳು ಬಗ್ಗೆ ರೈತರು ಮತ್ತು ಅರಣ್ಯ ಇಲಾಖೆ ನಡುವೆ ಪೋಡಿ ದುರಸ್ಥಿ ಬಗ್ಗೆ ನಡೆಯುತ್ತಿದ್ದ ವ್ಯಾಜ್ಯಗಳ ಸಂಬಂಧ ಈಗಾಗಲೇ ಸ್ಥಳೀಯ ಅರಣ್ಯ ವ್ಯವಸ್ಥಾಪನಾಧಿಕಾರಿಗಳು (Forest Settlement Officer) 2017 ರಿಂದ ಸುಧೀರ್ಘವಾಗಿ 5 ವರ್ಷಗಳ ಕಾಲ ವಿಚಾರಣೆ ನಡೆಸಿ, ದಿನಾಂಕ:26-10-2021 ರಂದು 97 ಜನ ರೈತರ ಪರವಾಗಿ ಆದೇಶಿಸಿರುತ್ತಾರೆ. ಆದಾಗ್ಯೂ ಅಂದಿನ ACF ರವರು (ಪ್ರಸ್ತುತ ಇದೇ ಜಾಗಕ್ಕೆ DCF ಬೆಂಗಳೂರು ದಕ್ಷಿಣ ಆಗಿ ನೇಮಕಗೊಂಡಿರುವುದು). ವೈಯುಕ್ತಿಕ ದ್ವೇಷದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, ರೈತರಿಗೆ ವಿನಾಕಾರಣ ಕಿರುಕುಳ ಗಂಭೀರ ಸಮಸ್ಯೆ ಕುರಿತು ಮಾನ್ಯ ಅರಣ್ಯ ಸಚಿವರ ಗಮನಸೆಳೆಯ ಬಯಸುತ್ತೇನೆ.

**ಉತ್ತರ:**

1) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಸುಂಕದಕಟ್ಟೆ ಗ್ರಾಮದ ಸರ್ವೆ ನಂ.37 ರಲ್ಲಿ ಅಧಿಸೂಚನೆ ಸಂಖ್ಯೆ: AHFF 78 FAF 87 dated: 26-12-1987, ರಂತೆ 88.36 ಹೆಕ್ಟೇರ್ (218.33 ಎಕರೆ) ಪ್ರದೇಶವನ್ನು ಹಾಗೂ ನೆಟ್ಟಿಗೆರೆ ಗ್ರಾಮದ ಸ.ನಂ 42 ರಲ್ಲಿ ಅಧಿಸೂಚನೆ ಸಂಖ್ಯೆ: AHFF 28 FAF 87 dated: 04-11-1987ರಂತೆ 91.21 ಹೆಕ್ಟೇರ್ (225.38 ಎಕರೆ) ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್-4 ರಡಿ ಅರಣ್ಯ ಪ್ರದೇಶವೆಂದು ಅಧಿಸೂಚಿಸಲಾಗಿರುತ್ತದೆ. ಈ ಎರಡು ಅಧಿಸೂಚನೆಗಳಲ್ಲಿ ಉಪ-ವಿಭಾಗಾಧಿಕಾರಿಗಳು, ಬೆಂಗಳೂರು ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿ ಎಂದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳು ನಡೆಸುವ ವಿಚಾರಣೆಗೆ ಅರಣ್ಯ ಇಲಾಖಾ ಪರವಾಗಿ ಪ್ರತಿನಿಧಿಸಲು ನೇಮಿಸಲಾಗಿರುತ್ತದೆ.

2) ಈ ಅರಣ್ಯ ಪ್ರದೇಶಗಳಿಗೆ ಸಂಬಂಧಿಸಿದಂತೆ ರೈತರು ಮತ್ತು ಅರಣ್ಯ ಇಲಾಖೆ ನಡುವೆ ಪೋಡಿ ದುರಸ್ಥಿ ಬಗ್ಗೆ ಯಾವುದೇ ವ್ಯಾಜ್ಯಗಳು ಇರುವುದಿಲ್ಲ. ಈ ಸಂಬಂಧ ಕಂದಾಯ ಇಲಾಖೆಯಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ ಕಛೇರಿಗೆ ಯಾವುದೇ ರೀತಿಯ ಪತ್ರ ವ್ಯವಹಾರ ನಡೆದಿರುವುದಿಲ್ಲ.

3) ಅರಣ್ಯ ವ್ಯವಸ್ಥಾಪನಾಧಿಕಾರಿಯವರು ಕರ್ನಾಟಕ ಅರಣ್ಯ ಕಾಯ್ದೆ ಕಾಲಂ 5 ರಿಂದ 16ರ ಪ್ರಕಾರ ವಿಧಿ ವಿಧಾನಗಳನ್ನು ಅನುಸರಿಸಿ ಅಧಿಸೂಚಿತ ಪ್ರದೇಶದಲ್ಲಿ ಹಕ್ಕುಭಾಧ್ಯತೆಗಳನ್ನು ಉದ್ಘೋಷಣೆ ಹೊರಡಿಸಿ, ಸಾರ್ವಜನಿಕರ ಹಕ್ಕುಭಾಧ್ಯತೆಗಳ ಬಗ್ಗೆ ವಿಚಾರಣೆ ನಡೆಸಿ ಸೆಟಲ್ ಮೆಂಟ್ ಮಾಡಬೇಕಾಗಿತ್ತು. ಅರಣ್ಯ ಇಲಾಖೆಯಲ್ಲಿ ಇರುವ ಮಾಹಿತಿ ಮತ್ತು ದಾಖಲಾತಿ ಪ್ರಕಾರ ಈ ಪ್ರಕ್ರಿಯೆಯನ್ನು ಅನುಸರಣೆ ಮಾಡದೆ ಅರಣ್ಯ ವ್ಯವಸ್ಥಾಪನಾಧಿಕಾರಿ ಡಾ|| ಎಂ.ಜಿ. ಶಿವಣ್ಣ ಇವರು ಕರ್ನಾಟಕ ಭೂ ಕಂದಾಯ ನಿಯಮ 1966 ರ ಅಡಿಯಲ್ಲಿ, ದಿನಾಂಕ 05.04.2017 ಮತ್ತು 07.04.2017ರಲ್ಲಿ ಅನಧಿಕೃತ ಭೂ ಮಂಜೂರಾತಿ ಕುರಿತು ಅರಣ್ಯ ಇಲಾಖೆ ಸಲ್ಲಿಸಿದ ಅರ್ಜಿಯನ್ನೇ ಪರಿಗಣಿಸಿ, ಅಂತಿಮ ಆದೇಶದಲ್ಲಿ 97 ಜನರ ಅರ್ಜಿಗಳನ್ನು ಪುರಸ್ಕರಿಸಿ ದಿನಾಂಕ:26.10.2021ರಲ್ಲಿ ಆದೇಶ ಹೊರಡಿಸಿರುತ್ತಾರೆ. ಈ ಆದೇಶದಲ್ಲಿ "In the court of Asssistant Commissioner, Bengaluru South Sub Division, Bengaluru-09" "The Forest Settlement officer and Assistant Commissioner" ಎಂದು ಸಹಿ ಮಾಡಲಾಗಿದೆ. ಈ ಆದೇಶ Forest Settlement Officer ರವರು ನ್ಯಾಯಾಲಯದಿಂದ ಆಗಿರುವುದಿಲ್ಲ ಬದಲಾಗಿ Assistant Commissioner ನ್ಯಾಯಾಲಯದಿಂದ ಹೊರಡಿಸಿರುವುದು ಕಂಡುಬಂದಿರುತ್ತದೆ.

4) ದಿನಾಂಕ 26.10.2021ರಂದು ಹೊರಡಿಸಿದ ಆದೇಶ ಎರಡು ವರ್ಷಗಳು ಗತಿಸಿದರೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ರವರಿಗೆ ತಲುಪಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸುಮಾರು ಎರಡು ತಿಂಗಳ ಹಿಂದೆ ಒಬ್ಬ ರೈತನಿಂದ ಈ ಆದೇಶದ ಪ್ರತಿ ಸಿಕ್ಕಿದ ನಂತರ ದಿನಾಂಕ 30.01.2024 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ದಕ್ಷಿಣ ಉಪ ವಿಭಾಗ ರವರು ಜಿಲ್ಲಾಧಿಕಾರಿ, ಬೆಂಗಳೂರು ನಗರ ರವರ ನ್ಯಾಯಾಲಯದಲ್ಲಿ ಮೆಲ್ಮನವಿ ಸಲ್ಲಿಸಿರುತ್ತಾರೆ.

5) ಈ ಮಧ್ಯೆ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಎಪಿಜೆ 171 ಎಪಿಎಸ್ 2018 ಬೆಂಗಳೂರು, ದಿನಾಂಕ :31.07.2019ರಲ್ಲಿ "ಅರಣ್ಯ ವ್ಯವಸ್ಥಾಪನಾಧಿಕಾರಿ" ರವರು ನೇಮಕ ಮಾಡಿ ಕರ್ನಾಟಕ ಅರಣ್ಯ ಕಾಯ್ದೆ ಕಾಲಂ 5 ರಿಂದ 16ರ ಪ್ರಕಾರ ವಿಧಿ ವಿಧಾನಗಳನ್ನು ಅನುಸರಿ ಅಧಿಸೂಚಿತ ಪ್ರದೇಶದಲ್ಲಿ ಹಕ್ಕುಭಾಧ್ಯತೆಗಳನ್ನು ಉದ್ಘೋಷಣೆ ಹೊರಡಿಸಿ, ಕೇಳಿ, ಸೆಟೆಲಮೆಂಟ್ ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ 'ಅರಣ್ಯ ವ್ಯವಸ್ಥಾಪನಾಧಿಕಾರಿ ರವರು ಈಗಾಗಲೇ ಕಾಲಂ 5ರ ಅಡಿಯಲ್ಲಿ ಉದ್ಘೋಷಣೆ ಮಾಡಿ ವ್ಯವಸ್ಥಾಪನ ಪ್ರಕ್ರಿಯೆ ಚಾಲನೆ ಮಾಡುತ್ತಿದ್ದಾರೆ. ವ್ಯವಸ್ಥಾಪನಾ ಪ್ರಕ್ರಿಯೆ ಮುಗಿದ ನಂತರ ರೈತರ ಹಕ್ಕುಭಾಧ್ಯತೆ ಬಗ್ಗೆ ತಿಳಿದು ಬರುತ್ತದೆ.

---

ಸಂ: ಅಪಜೀ 33 ಎಫ್ಎಫ್ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು